## ಬೆಂಗಳೂರು ಜಲಮಂಡಳಿಯ ಸೂಪರ್ ನ್ಯೂಮರರಿ ನೌಕರರಿಗೆ ಪದನಾಮ ನೀಡುವ ಬಗ್ಗೆ

**1505:** ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ):– ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ಬೆಂಗಳೂರು ಜಲಮಂಡಳಿಯಲ್ಲಿರುವ ಸೂಪರ್‌ನ್ಯೂಮರರಿ ನೌಕರರಿಗೆ ಪದನಾಮ ನೀಡುವ ವಿಚಾರವು ಯಾವ ಹಂತದಲ್ಲಿದೆ;

2. ಪದನಾಮ ನೀಡದೆ ಇರುವುದರಿಂದ ಅಕ್ಷರಸ್ಥ ನೌಕರರಿಗೆ ವಿವಿಧ ಬಣ್ಣಗಳ ಗುರುತಿನ ಚೀಟಿ ನೀಡುವಲ್ಲಿ ತೊಂದರೆ ಆಗಿರುವುದು ನಿಜವೇ;

3. ಹಾಗಿದ್ದಲ್ಲಿ ಪದನಾಮವನ್ನು ಹಾಗೂ ಗುರುತಿನ ಚೀಟಿಯನ್ನು ನೀಡಲು ಕ್ರಮ ತೆಗೆದುಕೊಳ್ಳಲಾಗುವುದೇ ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):–

1. ಮಂಡಳಿಯ ಪರಿಶೀಲನೆಯಲ್ಲಿದೆ.

2. ಇಲ್ಲ.

3. ಉದ್ಭವಿಸುವುದಿಲ್ಲ.

## ಅಂಗನವಾಡಿ ಕೇಂದ್ರಗಳನ್ನು ಕುರಿತು

**2181:** ಶ್ರೀ ಎಂ.ಕೆ. ಪಟ್ಟಣಶೆಟ್ಟಿ (ಬಾದಾಮಿ):– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬಾದಾಮಿ ತಾಲ್ಲೂಕಿನಲ್ಲಿ ಇರುವ ಅಂಗನವಾಡಿ ಕೇಂದ್ರಗಳು ಎಷ್ಟು;

ಆ. ಜನಸಂಖ್ಯೆಯ ಅನುಗುಣವಾಗಿ ಇದೆಯೇ;

ಇ. ಇಲ್ಲದಿದ್ದ ಪಕ್ಷದಲ್ಲಿ ಉಳಿದ ಅಂಗನವಾಡಿಗಳನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):–

ಅ. 140

ಆ. ಇಲ್ಲ.

ಇ. ಹಂತ ಹಂತವಾಗಿ ಪ್ರಾರಂಭಿಸಲಾಗುವುದು.

## ವಿಶೇಷ ಘಟಕ ಯೋಜನೆಯಲ್ಲಿ ಬಿಡುಗಡೆ ಮಾಡಿದ ಹಣದ ಬಗ್ಗೆ

**2175:** ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ):– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. 1990–91, 91–92, 92–93 ಮತ್ತು ಫೆಬ್ರವರಿ 93ರವರೆಗೆ ವಿಶೇಷ ಘಟಕ ಯೋಜನೆಯಡಿ

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬಿಡುಗಡೆ ಮಾಡಿರುವ ಮೊತ್ತವೆಷ್ಟು: (ಜಿಲ್ಲಾವಾರು ವಿವರ ನೀಡುವುದು);

ಆ. ಬೆಂಗಳೂರು ಜಿಲ್ಲೆಯಲ್ಲಿ ಈ ಯೋಜನೆಯಡಿ ಯಾವ ಯಾವ ಕಾರ್ಯಕ್ರಮಗಳಿಗೆ ಈ ಹಣ ಬಳಸಲಾಗಿದೆ. (ತಾಲ್ಲೂಕುವಾರು ವಿವರ ನೀಡುವುದು);

ಇ. ಈ ಯೋಜನೆಗಾಗಿ ಒದಗಿಸಲಾದ ಹಣ ಕಳೆದ ಮೂರು ವರ್ಷಗಳಲ್ಲಿ ವ್ಯರ್ಥವಾಗಿದೆಯೇ;

ಈ. ಹಾಗಿದ್ದಲ್ಲಿ, ಹಣ ವ್ಯರ್ಥವಾಗಲು (ಲ್ಯಾಪ್ಸ್) ಕಾರಣಗಳೇನು ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):–

ಅ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. (ಅನುಬಂಧ – 1)

ಆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. (ಅನುಬಂಧ – 2)

ಇ. ಇಲ್ಲ.

ಈ. ಉದ್ಭವಿಸುವುದಿಲ್ಲ.

## ಅನುಬಂಧ – 1

**1990-91, 91-92, 92-93 (ಫೆಬ್ರುವರಿ 93ರವರೆಗೆ) ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆಯಡಿ ಬಿಡುಗಡೆ ಮಾಡಲಾದ ಮೊತ್ತದ ಜಿಲ್ಲಾವಾರು ವಿವರ**

| ಕ್ರ.ಸಂ. | ಜಿಲ್ಲೆಯ ಹೆಸರು | ಬಿಡುಗಡೆ ಮಾಡಲಾದ ಹಣ (ರೂ. ಲಕ್ಷಗಳಲ್ಲಿ) |
|---|---|---|
| 1. | ಬೆಂಗಳೂರು ನಗರ | 184.99 |
| 2. | ಬೆಂಗಳೂರು ಗ್ರಾಮಾಂತರ | 483.91 |
| 3. | ಚಿತ್ರದುರ್ಗ | 318.29 |
| 4. | ಕೋಲಾರ | 427.68 |
| 5. | ಶಿವಮೊಗ್ಗ | 352.06 |
| 6. | ತುಮಕೂರು | 454.68 |
| 7. | ಚಿಕ್ಕಮಗಳೂರು | 229.44 |
| 8. | ದಕ್ಷಿಣ ಕನ್ನಡ | 309.40 |
| 9. | ಹಾಸನ | 313.98 |
| 10. | ಮಡಿಕೇರಿ | 123.61 |
| 11. | ಮಂಡ್ಯ | 363.23 |
| 12. | ಬೆಳಗಾಂ | 422.32 |
| 13. | ಬಿಜಾಪುರ | 488.31 |
| 14. | ಧಾರವಾಡ | 496.36 |
| 15. | ಉತ್ತರ ಕನ್ನಡ | 148.21 |
| 16. | ಗುಲ್ಬರ್ಗಾ | 714.31 |

| | | |
|---|---|---|
| 17. | ಬಳ್ಳಾರಿ | 300.35 |
| 18. | ಬೀದರ್ | 288.95 |
| 19. | ರಾಯಚೂರು | 550.90 |
| 20. | ಮೈಸೂರು | 551.65 |
| | ಒಟ್ಟು ರೂ. ಲಕ್ಷಗಳಲ್ಲಿ | 7522.63 |

## ಅನುಬಂಧ – 2

1990–91, 91–92, 92–93ನೇ ಸಾಲಿನಲ್ಲಿ ಬೆಂಗಳೂರು ಜಿಲ್ಲೆ (ನಗರ, ಗ್ರಾಮಾಂತರ)ಯಲ್ಲಿ ವೆಚ್ಚ ಮಾಡಿದ ಬಾಬ್ತು ಹಾಗೂ ಹಣದ ತಾಲ್ಲೂಕುವಾರು ವಿವರ

(ರೂ. ಲಕ್ಷಗಳಲ್ಲಿ)

| ಕ್ರ. ಸಂ. | ಇಲಾಖೆಯ ಹೆಸರು | ಅನೇಕಲ್ | ಬೆಂಗಳೂರು - ದಕ್ಷಿಣ | ಬೆಂಗಳೂರು ಉತ್ತರ | ಚನ್ನಪಟ್ಟಣ | ರಾಮನಗರ | ಮಾಗಡಿ | ಕನಕಪುರ | ಹೊಸಕೋಟೆ | ದೇವನಹಳ್ಳಿ | ನೆಲಮಂಗಲ | ದೊಡ್ಡಬಳ್ಳಾಪುರ |
|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 |
| 1. | ಸಮಾಜ ಕಲ್ಯಾಣ | 4.18 | 3.09 | 2.69 | 2.68 | 6.43 | 1.21 | 3.85 | 2.78 | 9.07 | 1.29 | 1.56 |
| 2. | ತೋಟಗಾರಿಕೆ | 1.82 | 1.65 | 1.61 | 1.38 | 1.36 | 1.30 | 1.52 | 1.44 | 1.14 | 1.35 | 1.36 |
| 3. | ಅರಣ್ಯ | 1.16 | 0.50 | 0.37 | 0.19 | 0.19 | 0.18 | 0.23 | 0.19 | 0.19 | 0.19 | 0.20 |
| 4. | ಪಶುಸಂಗೋಪನೆ | 3.92 | 0.88 | 2.90 | 1.71 | 2.37 | 1.50 | 1.80 | 1.86 | 1.68 | 2.12 | 1.84 |
| 5. | ಭೂಸಾರ ಸಂರಕ್ಷಣೆ | 1.65 | 1.55 | 2.10 | 1.25 | 1.25 | 1.49 | 1.71 | 1.32 | 1.50 | 1.50 | 1.46 |
| 6. | ಸಣ್ಣ ಕೈಗಾರಿಕೆ | 3.08 | 5.36 | 3.93 | 4.56 | 2.19 | 2.49 | 3.24 | 2.84 | 2.04 | 3.38 | 2.73 |
| 7. | ವಿಶೇಷ ಪೌಷ್ಟಿಕ ಆಹಾರ ಯೋಜನೆ | 3.66 | 4.00 | 3.53 | – | – | – | – | 5.91 | 5.91 | 7.63 | – |
| 8. | ಗ್ರಾಮೀಣ ವಸತಿ | 2.45 | 3.10 | 2.45 | – | – | – | – | – | – | – | – |
| 9. | ರೇಷ್ಮೆ | 2.00 | 1.63 | 1.73 | 5.55 | 1.94 | 3.68 | 5.60 | 3.77 | 3.92 | 1.08 | 3.20 |
| 10. | ಕೃಷಿ | 1.83 | 1.50 | 1.50 | 1.45 | 1.37 | 1.48 | 1.79 | 1.45 | 1.80 | 1.76 | 1.45 |
| 11. | ಗ್ರಾಮೀಣ ನೀರು ಸರಬರಾಜು | 16.02 | 12.61 | 9.50 | 6.41 | 0.23 | 17.59 | 3.58 | 9.16 | 2.95 | 4.50 | 0.97 |

| | | | | | | | | | | | |
|---|---|---|---|---|---|---|---|---|---|---|---|
| 12. ರಸ್ತೆ ಮತ್ತು ಸೇತುವೆಗಳು | 11.86 | 13.93 | 6.49 | 9.54 | 11.84 | 19.23 | 16.36 | 5.49 | 2.54 | 9.42 | 3.89 |
| 13. ಗಂಗಾ ಕಲ್ಯಾಣ ಯೋಜನೆ | – | – | – | 5.52 | 3.83 | 5.65 | 5.17 | 3.65 | 4.02 | 1.17 | 3.88 |
| ಒಟ್ಟು ರೂ. ಲಕ್ಷಗಳಲ್ಲಿ | 53.63 | 49.80 | 38.80 | 40.24 | 33.10 | 55.80 | 44.85 | 39.86 | 37.76 | 34.94 | 22.54 |